SN – 019

# ಮೂರನೇ ಸೆಮಿಸ್ಟರ್ ಬಿ.ಸಿ.ಎ. ಪರೀಕ್ಷೆ, ನವೆಂಬರ್/ಡಿಸೆಂಬರ್ 2014
## (Freshers and Repeaters Scheme)
## (2012-13 and Onwards)
## ಕನ್ನಡ ಭಾಷಾ ಪತ್ರಿಕೆ – III
## ಸಾಹಿತ್ಯ ಸಲ್ಲಾಪ - ೨

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 100

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : (1×5=5)

1) 'ಎಮ್ಮ ರೂಪುಜವ್ವನವಿರಲು ಕುಲದ ಮಾತೇಕೆ ?'– ಈ ವಾಕ್ಯವನ್ನು ಹೊಸಗನ್ನಡದಲ್ಲಿ ಬರೆಯಿರಿ.

2) 'ಇದ್ದಕ್ಕಿದ್ದಂತೆ ಆಕೆಯ ಕಣ್ಣುಗಳಲ್ಲಿ ರೋಷ ಉಕ್ಕಿದವು' – ಇಲ್ಲಿನ ವಚನ ದೋಷವನ್ನು ಸರಿಪಡಿಸಿ.

3) 'ಹುಡುಗನಿಗೆ ಈಗ ನಗಬಹುದೆಂದೆನಿಸಿತು' – ಈ ವಾಕ್ಯದ ಲಿಂಗರೂಪವನ್ನು ಬದಲಿಸಿ.

4) 'ಆ ಶಿಲ್ಪದಲ್ಲಿ ಅದ್ಭುತ ಕಳೆಯಿದೆ' – ಇಲ್ಲಿನ ವಿಭಕ್ತಿ ಪ್ರತ್ಯಯವನ್ನು ಬದಲಿಸಿ.

5) 'ಅಕ್ಕ ಮೈಸೂರಿಗೆ ಹೋಗಿದ್ದಾಳೆ' – ಈ ವಾಕ್ಯವನ್ನು ಭೂತಕಾಲರೂಪಕ್ಕೆ ಪರಿವರ್ತಿಸಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : (1×5=5)

1) 'ಮನೆಯವರು ಅತ್ತೆಯನ್ನು ಚೆನ್ನಾಗಿ ನೋಡಿಕೊಳ್ಳದೇ ಇರುವರೇ ?' – ಈ ಮಾತನ್ನು ಹೇಳಿಕೆಯಾಗಿ ಪರಿವರ್ತಿಸಿ.

2) 'ಮುಂಬಯಿಯಲ್ಲಿ ಮನೆ ಸಿಗುವುದು ಅಷ್ಟು ಸುಲಭವಲ್ಲ' – ಈ ವಾಕ್ಯವನ್ನು ಪ್ರಶ್ನೆಯಾಗಿ ಪರಿವರ್ತಿಸಿ.

3) ನ್ಯಾಯ ಪರಿಪಾಲನೆಯ ನೆಲೆಯಲ್ಲಿ ಪೋಲಿಸಿನವನಿದ್ದರೆ, ಸಮಾಜ ಪ್ರಜ್ಞೆಯ ನೆಲೆಯಲ್ಲಿ ಕೋತಿ ಆಡಿಸುವವನು ಇದ್ದನು' – ಎರಡು ಸರಳ ವಾಕ್ಯಗಳಲ್ಲಿ ಬರೆಯಿರಿ.

4) 'ಖಾರದ ಚಟ್ನಿ ಹಚ್ಚಿದ ಎರಡು ರೊಟ್ಟಿ ಕೈಲಿಟ್ಟಳು. ಹಸಿದ ಹೊಟ್ಟೆಗೆ ಹಿತವಾಯಿತು'– ಒಂದೇ ವಾಕ್ಯದಲ್ಲಿ ಬರೆಯಿರಿ.

5) ಎಷ್ಟು ಬೇಗ ದಿನಗಳೆಲ್ಲ ಹಾರಿಬಿಟ್ಟವು ಮೊನ್ನೆ ಮೊನ್ನೆ ಆ ದೊಡ್ಡಮನೆಯಲ್ಲಿ ಮದುವೆಯಾಗಿ ಹೊಕ್ಕಂತಿದೆ ಮೊನ್ನೆ ಮೊನ್ನೆ ಶಾರದೆ ಶ್ರೀಧರ ಸಣ್ಣಮಾಣಿ ಹುಟ್ಟಿದಂತಿದೆ – ಸೂಕ್ತ ಲೇಖನ ಚಿಹ್ನೆಗಳನ್ನು ನೀಡಿ.

III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : (1×5=

1) ಎಳ್ಳು ನೀರು ಬಿಡು – ಈ ನುಡಿಗಟ್ಟನ್ನು ವಾಕ್ಯದಲ್ಲಿ ಪ್ರಯೋಗಿಸಿ.

2) ಅಕೌಂಟಲ್ಲಿ ದುಡ್ಡಿಲ್ಲ – ಈ ಬಗೆಯ ನುಡಿಬೆರಕೆಯ ವಾಕ್ಯವನ್ನು ರಚಿಸಿ.

3) 'ಮುತ್ತಿನಂಥಾ ಮಾತು' – ಈ ಉಪಮೆಯನ್ನು ವಾಕ್ಯದಲ್ಲಿ ಬಳಸಿ.

4) ಹೊಂಗನಸು – ಈ ರೂಪಕವನ್ನು ವಾಕ್ಯದಲ್ಲಿ ಬಳಸಿ.

5) 'ಭ್ರಷ್ಟತೆ ನಿವಾರಿಸಿ, ಸಮಾನತೆ ಸ್ಥಾಪಿಸಿ' – ಈ ಬಗೆಯ ಘೋಷವಾಕ್ಯ ಬರೆಯಿರಿ.

IV. ಈ ಪದ್ಯಭಾಗದ ಅರ್ಥವನ್ನು ವಿವರಿಸಿ : (1×5=

ಮಾತಿಂಗೆ ಮಾತುಗೊಡಲರಿದು ನಿನ್ನಯ ನುತ
ಖ್ಯಾತಿಗದಟಿಂಗೆ ರೂಪಿಂಗೆ ಸುರುಚಿರ ಗುಣ
ವ್ರಾತಕ್ಕೆ ಹರೆಯಕ್ಕೆ ಗರುವಿಕೆಗೆ ಮನಸಂದು ಮರುಳಾಗಿ ಮತಿಗೆಟ್ಟೆವು
ಓತು ಬಂದವರನುಪಚರಿಸದಿಪ್ಪುದು ನಿನಗೆ
ನೀತಿಯಲ್ಲೇಗೆಯ್ದಡಂ ಗಂಡನಾದಲ್ಲ
ದಾತುರಂ ಪೋಗದಿನ್ನೊಲಿದಂತೆ ಮಾಡು ನಿನ್ನಯ ಬಿಡೆವೆಂದರು ॥

V. **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : (6×2=1

ಷಟ್ಪದಿ ಕಾವ್ಯ, ಮಹಾವೀರ ಮೆಹತಾ, ಕಾಯಕದ ಮಹತ್ತ್ವ, ಬೆಸಗರಹಳ್ಳಿ ರಾಮಣ್ಣ.

VI. ಈ ಪ್ರಶ್ನೆಗಳಿಗೆ **ಇಪ್ಪತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿ : (5×4=2

1) ನುಲಿಯ ಚಂದಯ್ಯನ ಲಿಂಗವು ಜಲದಲ್ಲಿ ಬೀಳಲು ಕಾರಣಗಳೇನು ?

**ಅಥವಾ**

'ಪಂಚೇಂದ್ರಿಯಗಳಲ್ಲಿ ನಾಲ್ಕು ಅಧಮ ಒಂದು ಅಧಿಕವೇ ?' – ಎಂದು ಗಾನರಾಣಿಯರು ಪ್ರಶ್ನಿಸಲು ಕಾರಣವೇನು ?

2) ಕಿಟ್ಟು ಶಿಕ್ಷಕಿಯ ಕೋಪಕ್ಕೆ ತುತ್ತಾಗಲು ಕಾರಣವೇನು ?

**ಅಥವಾ**

ಮುಂದಕ್ಕನ ಕಿರಿಯ ಮಗ ಯಾರು ? ಆತ ಬೆರಳು ಚೀಪುವುದನ್ನು ನಿಲ್ಲಿಸಿದ್ದು ಹೇಗೆ ?

3) ಮಂಚ ಯಾರು ? ಆತನನ್ನು ದಫೇದಾರ ಠಾಣೆಗೆ ಹಿಡಿದುಕೊಂಡು ಬಂದದ್ದು ಏಕೆ ?

**ಅಥವಾ**

ದೇವತೆಗಳ ಕೋಪದ ಲಾಂಛನಗಳಾವುವು ? ಅವುಗಳ ಬಗ್ಗೆ ಗುಡ್ಡಗಾಡಿನ ಜನರಲ್ಲಿದ್ದ ನಂಬಿಕೆಗಳೇನು ?

4) 'ಬೆಲ್ಚಿ ಪ್ರಕರಣ– ರಾಕ್ಷಸೀ ಪ್ರವೃತ್ತಿಗೆ ಹಿಡಿದ ಕನ್ನಡಿ' – ಚರ್ಚಿಸಿ.

**ಅಥವಾ**

ಮಹಾವೀರ ಮೆಹತಾ ಯಾರು ? ಆತ ಬ್ರಾಹ್ಮಣ ಕುಟುಂಬಕ್ಕೆ ನೀಡಿದ ಶಿಕ್ಷೆ ಏನು ?

VII. ಈ ಕೆಳಗಿನ ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : **(12×4=48)**

1) ಹೆಣ್ಣಿನ ಮನದಾಳದ ನೋವು ಶಶಿಕಲಾ ವೀರಯ್ಯ ಸ್ವಾಮಿ ಅವರ ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ ?

**ಅಥವಾ**

ಲಿಂಗ ಹಾಗೂ ನುಲಿಯ ಚಂದಯ್ಯನ ನಡುವೆ ಮಡಿವಾಳ ಮಾಚಯ್ಯನವರು ಸಂಧಾನ ಮಾಡಿಸಿದ್ದು ಹೇಗೆ ? ವಿವರಿಸಿ.

2) 'ಆಧುನಿಕತೆಯು ಕುಟುಂಬ ವ್ಯವಸ್ಥೆಯನ್ನು ಪಲ್ಲಟಗೊಳಿಸುತ್ತಿದೆ'. – ಈ ಹೇಳಿಕೆಯನ್ನು 'ಮರಗಿಡ ಬಳ್ಳಿ' – ಕಥೆಯ ಹಿನ್ನಲೆಯಲ್ಲಿ ಚರ್ಚಿಸಿ.

**ಅಥವಾ**

ಜಗತ್ತು ಇಷ್ಟೊಂದು ರೋಗಗ್ರಸ್ಥ – ಎಂದು ಕಿಟ್ಟು ಭಾವಿಸಲು ಕಾರಣವೇನು ? ಚರ್ಚಿಸಿ.

3) ಬಿಹಾರ್ ಅಸೆಂಬ್ಲಿಯಲ್ಲಿ ಚರ್ಚಿಸಲಾದ 'ಬೆಲ್ಚಿ' ಪ್ರಕರಣವನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ಪರಶುರಾಮ, ಸಿಂಘ್ವಾನ ಮೇಲೆ ಸೇಡು ತೀರಿಸಿಕೊಂಡ ಬಗೆ ಹೇಗೆ ? ವಿವರಿಸಿ.

4) ಅನುಕರಣ ಸಂಸ್ಕೃತಿಯನ್ನು ಕುರಿತು ತ್ಯಾಗೀಶಾನಂದಜೀ ಅವರ ಅಭಿಪ್ರಾಯಗಳೇನು ? ವಿವರಿಸಿ.

**ಅಥವಾ**

ಮಹಿಳೆ ಮತ್ತು ವಿಜ್ಞಾನ – ಪ್ರಬಂಧದಲ್ಲಿ ವ್ಯಕ್ತವಾಗಿರುವ ಸ್ತ್ರೀಪರ ಕಾಳಜಿಯನ್ನು ವಿಶ್ಲೇಷಿಸಿ.